

ಪುಟ್ಟವ್ವನನ್ನು ನೋಡಿ ಬಂದ ಕಥೆಯು ವಾರಗಟ್ಟಲೇ ಚರ್ಚೆಯಾಯಿತು. ಅವಳ ಚೆಲುವು, ಕಾರುಬಾರು, ದರ್ಬಾರು ಜೊತೆಗೆ ಅವಳ ಕಕ್ಕುಲಾತಿ ಎಲ್ಲರ ನಾಲಗೆಯ ಮೇಲೆ ನಲಿದಾಡಿತು. ಅವಳ ಕುರಿತು ಕೇಡು ಮಾತನಾಡದವನೆಂದರೆ ದುಬ್ಬೀರ ಮಾತ್ರ. ಎರಡು ಉಬ್ಬು ಹಲ್ಲು ಇಟ್ಟುಕೊಂಡು ಹೋದವನನ್ನು ಯಾವ ಹಾಳು ಸೂಳೆ ಒಪ್ಪುತ್ತಾಳೆ ಎಂದು ದುಬ್ಬೀರನನ್ನು ಓರಗೆಯವರು ಗೇಲಿ ಮಾಡಿದರು. ಎಲ್ಲರೂ ಎರಡು ಕೈಯಲ್ಲಿ ಉಂಡು ಬಂದಿದ್ದರು. ದುಬ್ಬೀರ ಮಾತ್ರ ಪುಟ್ಟವ್ವ ಕೆನ್ನೆ ತಟ್ಟಿ ಹೇಳಿದ ಅವ್ವನ ಎರಡು ಮಾತುಗಳನ್ನು ಎದೆಗಿಳಿಸಿಕೊಂಡು ಬಂದಿದ್ದ.

ಮೆಣಸಿನಕಾಯಿ ಮಾರಿದ ಪಟ್ಟಿ ಹುಟ್ಟಿದ ಮೇಲೆ ಬಂದ ಇಡಿಗಂಟನ್ನು ಬದ್ದಿಯಲ್ಲಿ ಇಟ್ಟುಕೊಂಡು ಎಲ್ಲರಂತೆ ಇವನೂ ಅಡ್ಡೆಗೆ ಹೋದವನೇ. ಬುಧವಾರ ಪೇಟೆಯ ಪಾತರದವರ ಮೋಡಿಗೆ ಈಡಾಗದವರು ಯಾರಿದ್ದಾರೆ. ಧೋತರ, ಪಂಜೆ, ಲಪಾಟಿ, ಜುಬ್ಬಾದವರು ಬಂದರೆಂದರೆ ಇದು ಹಾವೇರಿಯ ಮಂದಿಯಂತಲೇ ಬುಧವಾರ ಪೇಟೆ ಎಣಿಸುತ್ತದೆ. ಹಾಗೆಯೇ ದುಬ್ಬೀರನು ಹೋಗಿದ್ದ. ಯಳಂದರಾಯರ ಪಟಾಲಂಗೆ ಇದು ಹೊಸದಲ್ಲ. ದುಬ್ಬೀರ ಮಾತ್ರ ಚೊಚ್ಚಿಲ ಕೂಸು. ಯಾವ ನದಿಯಲ್ಲಾದರೂ ಸರಿ ಧುಮುಕಿ ತಣ್ಣಗಾಗಬೇಕು ಎಂದು ಎಲ್ಲರೂ ಎಂದುಕೊಂಡರೆ, ಈ ದುಬ್ಬೀರನಿಗೆ ಪುಟ್ಟವ್ವಳೇ ಬೇಕು. ಊರೂರು ಕಟ್ಟೆಗಳಲ್ಲಿ ನಡೆಯುತ್ತಿದ್ದ ಅವಳ ಸೌಂದರ್ಯ ಮೀಮಾಂಸೆಯನ್ನು ಗೋಲಿಯಾಡುತ್ತ ಕೇಳಿ ಬೆಳೆದ ಹುಡುಗ ಅವನು. ಅವನ ಕಲ್ಪನೆಯಲ್ಲಿ ಅವಳು ದೇವಕನ್ನಿಕೆ. ಮನಸ್ಸಿನ ಆಳದಲ್ಲಿ ಗೋಪುರ ಕಟ್ಟಿ ಕೆತ್ತಿಕೊಂಡ ಅಪೂರ್ವ ಮೂರ್ತಿ.

ಅವಳನ್ನು ಕಾಣಲು ಅದೆಷ್ಟೋ ಹೊಸಲು ದಾಟಿಕೊಂಡು ದುಬ್ಬೀರನನ್ನು ಹಜಾರಕ್ಕೆ ಕರೆದುಕೊಂಡು ತಂದರು. ಎತ್ತರದ ಸೋಫಾದಲ್ಲಿ ಅಂಬಾ ಬರ್ಫಿ ಮೆಲ್ಲುತ್ತಿರುವ ದೇವಕನ್ನಿಕೆ. ಆಗ ತಾನೆ ಕುಡಿಯೊಡೆಯುತ್ತಿರುವ ಮೀಸೆ ಚಿಗುರು ಅವನದು. ಹಾಲು ಕುಡಿದು ಒರೆಸಿಕೊಂಡಂತಿರುವ ಎಳಸು ಧರ್ಮ, ಕಣ್ಣುಗಳಲ್ಲಿ ಪೆಕರು ನೋಟ, ಏರು ಬಿಗಿದು ಬುದ್ಧಿ ಮುಂದೆ ಕಟ್ಟಿಕೊಂಡಿರುವ ಬುಳ್ಡಗಚ್ಚೆ... ಅಲ್ಲೊಂದು ನಿಷ್ಪಾಪಿ ಹಪಹಪಿ. ಪಾಪದ ಹುಡುಗನೊಬ್ಬ ಹಿಡಿ ಪೆಂಡಿ ನೋಟು ಚಾಚಿ ಹಿಡಿದು ತಲೆ ಬಗ್ಗಿಸಿ ನಿಂತಿದ್ದಾನೆ. ಪುಟ್ಟವ್ವಳ ಕೋಟೆವಾಡೆಯ ಗತ್ತು, ಧಿಕಾವು ಒಮ್ಮೆಲೆ ಜರ್‍ರನೇ ಇಳಿದುಹೋಯಿತು. ಕಳೆದ ದಶಕಗಳು ಕಣ್ಣೆದುರೇ ಸರಿದುಹೋದವು.

ಆ ದಿವಸ ನಸುಕು ಹರಿಯುವ ಮುನ್ನವೇ ಒಬ್ಬಂಟಿಯಾಗಿಸಿ ಬಿಟ್ಟು ಬಂದಿದ್ದ ತನ್ನ ಗಂಡನೇ ಪುಟ್ಟವ್ವಳಿಗೆ ನೆನಪಿಗೆ ಬಂದ. ಮೆಟ್ಟಿಲಿಳಿದು ದುಡುದುಡು ಓಡಿ ಬಂದವಳೇ ದುಬ್ಬೀರನನ್ನು ಭರಸೆಳೆದು ಅಪ್ಪಿ ಮುದ್ದಾಡಿದಳು. ಅವಳು ಕಣ್ಣೀರಾಗಿ ಹರಿಯತೊಡಗಿದಳು. ತಾನು ಅವಮಾನಕ್ಕೊಳಗಾದಾಗ ತನ್ನನ್ನು ಎಳ್ಳಷ್ಟೂ ದೂಷಿಸದೇ ತನ್ನ ಸೋತ ರಟ್ಟೆಗಳಿಂದ ಎದೆಗವಚಿಕೊಂಡು ರಾತ್ರಿಯಿಡೀ ಸಂತೈಸುತ್ತಲೇ ಇದ್ದ ಗಂಡ ಅವಳನ್ನು ಕಾಡತೊಡಗಿದ. ತನ್ನ ಗಂಡನ ಸೋತ ರಟ್ಟೆಗಳು ಯುದ್ಧ ಗೆದ್ದ ಯಾವ ಶೂರನ ಬಾಹುಗಳಿಗಿಂತಲೂ ಶಕ್ತವಾದವು ಎನಿಸತೊಡಗಿತು. ಅಂಥದ್ದೇ ಅಬ್ಬೆಪಾರಿ ಅಮಾಯಕ ದುಬ್ಬೀರ ಕಣ್ಣೆದುರು ಕೈಚಾಚಿ ನಿಂತಿದ್ದ. ತನಗೆ ಮಕ್ಕಳಾಗಿದ್ದರೆ ಈ ವಯಸ್ಸಿವನೇ ಮಗನಿರುತ್ತಿದ್ದ ಎನಿಸಿತು. ಅವಳು ದುಬ್ಬೀರನನ್ನು ಅಪ್ಪಿಕೊಂಡು ಅಡ್ಡೆಯ ಹಂಚು ಹಾರುವಂತೆ ಕೂಗಿದಳು. ಕೋಣೆಗಳ ಕುಲುಕುಲು ಕಲರವದ ಮಧ್ಯೆಯೂ ಅಪ್ಪಟ ತಾಯಿ ಮಮತೆಯೊಂದು ಉಸಿರಾಡತೊಡಗಿತು.

★ವಖಾರ: ಒಣ ಮೆಣಸಿನಕಾಯಿ ಮಾರುವ ಮಾರುಕಟ್ಟೆ